ವಿಶ್ವಾಸದಿಂದ ನೋಡಿಕೊಳ್ಳುವ ಜವಾಬ್ದಾರಿಯಿದೆ. ಇಲ್ಲಿ ಬಂದೊಮ್ಮೆ ಕುಳಿತುಕೊಂಡಾಗ ನಿಮ್ಮನ್ನೂ ಕೂಡ ಅವರಷ್ಟೇ ಪ್ರೀತಿಯಿಂದ ನೋಡುತ್ತೇನೆ. ಯಾವುದೇ ರೀತಿಯಲ್ಲಿಯೂ ತೊಂದರೆ ಮಾಡುವುದಿಲ್ಲ.

ಶ್ರೀ ಸಿದ್ಧರಾಮಯ್ಯ: As a person, as a human being ನಾನು ಬಹಳ ಪ್ರೀತಿಸುತ್ತೇನೆ, ಬಹಳ ಗೌರವಿಸುತ್ತೇನೆ. Person to person I respect you like anything. ಆದರೆ ರಾಜಕೀಯವಾಗಿ ಅಗೌರವದಿಂದ ಕಾಣುತ್ತೇವೆಂದಲ್ಲ. ಸಿದ್ಧಾಂತದ ಮೇಲೆ ನಿಮ್ಮನ್ನು ತೀವ್ರವಾಗಿ ವಿರೋಧ ಮಾಡುತ್ತೇವೆ. ಅದರ ಬಗ್ಗೆ ಎರಡನೇ ಮಾತಿಲ್ಲ. As a person ಬಹಳಷ್ಟು ಗೌರವದಿಂದ, ಪ್ರೀತಿಯಿಂದ, ಅಭಿಮಾನದಿಂದ ನಿಮ್ಮನ್ನು ಕಾಣುತ್ತೇವೆ. ಅದರ ಬಗ್ಗೆ ಯಾವುದೇ ಮಾತಿಲ್ಲ. ಅಲ್ಲಿರುವವರೆಲ್ಲರ ಬಗ್ಗೆಯೂ ನಮಗೆ ಪ್ರೀತಿ ವಿಶ್ವಾಸ ಇದೆ. ನೋಡಿ ನನ್ನ ಬಗ್ಗೆ ಚಂದ್ರಕಾಂತ್ ಬೆಲ್ಲದ್ ಅವರು ಎಷ್ಟು ಪ್ರೀತಿಯಿಂದ ನೋಡುತ್ತಾರೆ.

ಅಧ್ಯಕ್ಷರು: ಗೋಪಾಲ ಭಂಡಾರಿಯವರೆ, ಪ್ರಶ್ನೆಯನ್ನು ಕೇಳಿ.

ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನು

ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):-

70 (24) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

(ಆ) ಹಾಗಿದ್ದಲ್ಲಿ, ಸ್ವಾಧೀನಪಡಿಸಿಕೊಳ್ಳಲಾದ ಜಮೀನಿಗೆ ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-

(ಅ) ಮತ್ತು (ಆ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನು ಹಾಗೂ ನೀಡಲಾಗಿರುವ ಪರಿಹಾರ ಮೊತ್ತದ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಶ್ರೀ ವಸಂತ ಬಂಗೇರ.ಕೆ, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:24ಕ್ಕೆ ಅನುಬಂಧ

ಸಣ್ಣ ನೀರಾವರಿ ಇಲಾಖೆಯಲ್ಲಿ ಕೆರೆಗಳ ನಿರ್ಮಾಣಕ್ಕಾಗಿ ಕಳೆದ 5 ವರ್ಷಗಳಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ವಿವರ.

ಕ್ರಸಂ.	ಜಿಲ್ಲೆ	ಸಂಖ್ಯೆ	ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ಕ್ಷೇತ್ರ (ಎಕರೆಗಳಲ್ಲಿ)	ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ)
1	ಬೆಳಗಾವಿ	14	218.00	247.13
2	ಧಾರವಾಡ	2	111.20	72.52
3	ಗದಗ	8	301.00	186.11
4	ಹಾವೇರಿ	2	169.00	43.72
5	ಬಿಜಾಪೂರ	28	1990.79	1801.47
6	ಬಾಗಲಕೋಟ	21	700.52	1733.49
7	ಉತ್ತರ ಕನ್ನಡ	1	28.00	19.77
8	ಗುಲಬರ್ಗಾ	48	1510.50	1028.37
10	ಬೀದರ	35	734.33	255.96
11	ಕೊಪ್ಪಳ	46	1276.05	597.19
12	ರಾಯಚೂರು	8	178.04	83.83
13	ಬಳ್ಳಾರಿ	9	326.27	147.87
14	ಹಾಸನ	2	13.33	7.32
15	ಚಿಕ್ಕಮಗಳೂರು	1	19.36	37.52
16	ಚಿತ್ರದುರ್ಗ	1	36.11	31.56
17	ದಾವಣಗೆರೆ	1	2.12	3.52
18	ಬೆಂಗಳೂರು(ಗ್ರಾ)	1	2.38	2.79
19	ಶಿವಮೊಗ್ಗ	5	34.12	129.20
20	ಚಿಕ್ಕಬಳ್ಳಾಪುರ	4	128.22	431.27
	ಒಟ್ಟು	237	7779.34	6860.61

ಶ್ರೀ ಎಚ್. ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೆ ಉತ್ತರ ಒದಗಿಸಿದ್ದಾರೆ. ಇಲ್ಲಿ ಯಾರು ಜಮೀನು ಕಳೆದುಕೊಂಡಿದ್ದಾರೆ ಅವರಿಗೆ ಎಷ್ಟು ಪರಿಹಾರ ದೊರೆಯತ್ತದೆಂಬ ಪ್ರಶ್ನೆಯ ಜೊತೆಗೆ ಅಲ್ಲಿ ವಸತಿ ಕಳೆದುಕೊಂಡವರು ಯಾರಾದರೂ ಇದ್ದರೆ ಅವರಿಗೆ ಪುನರ್ವಸತಿ ಏನಾದರೂ ಮಾಡಿರುವಿರಾ ಎಂಬ ಮತ್ತೊಂದು ಪ್ರಶ್ನೆ. ಇನ್ನೆಷ್ಟು ಉಳಿದುಕೊಂಡಿದೆ ಎಂಬ ಬಗ್ಗೆ ಮಾಹಿತಿ ಕೊಟ್ಟರೆ ಒಳ್ಳೆಯದು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. 237 ಕೆರೆಗಳ ನಿರ್ಮಾಣಕ್ಕೆ 7779.34 ಎಕರೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ. 68,60,61,000 ರೂಪಾಯಿಗಳಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. ತಾವು ಕೇಳುವಂತದ್ದು ಕಟ್ಟಡ ಯಾವುದಾದರೂ ಮುಳುಗಿದ್ದರೆ ಎಂದು. ಅಂತವರದ್ದು ನನ್ನ ಗಮನಕ್ಕೆ ತಂದರೆ ನಿರ್ದಿಷ್ಟ ಪ್ರಕರಣವೇನಾದರೂ ಇದ್ದರೆ ಖಂಡಿತ ಮಾಡುತ್ತೇನೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು):- ದಿನಾಂಕ 12-12-2011ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 96 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ (ಅನುಬಂಧ-1)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅಧ್ಯಕ್ಷರು: ಈಗ ಶೂನ್ಯವೇಳೆ, ಶ್ರೀ ಶಂಕರಲಿಂಗೇಗೌಡರು ಹಾಗೂ ಶ್ರೀ ರೇವಣ್ಣನವರು ಇಬ್ಬರದೂ ಒಂದೇ ಪ್ರಶ್ನೆ.

ಅ) ವಿಷಯ: ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಮರಳಿನ ಮಾರಣಹೋಮ ಹಾಗೂ ಕಾರ್ಮಿಕರ ಸಮಸ್ಯೆ ಬಗ್ಗೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಸಭಾಧ್ಯಕ್ಷರೇ, ನಾನು . . .

ಶ್ರೀ ಹೆಚ್. ಡಿ. ರೇವಣ್ಣ: ಅಧ್ಯಕ್ಷರೇ, ನಾವು ಒಂದು ಮನವಿಯನ್ನು ತಂದಿದ್ದೇವೆ. ದಯಮಾಡಿ ಆಮೇಲೆ ಅವಕಾಶ ಮಾಡಕೊಡಿ.

ಅಧ್ಯಕ್ಷರು: ಆಯಿತು

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರು ಜಿಲ್ಲೆಯಲ್ಲಿ ಮರಳಿಗೆ ಮಾರಣಹೋಮವಾಗುತ್ತಿದೆ. ನಮ್ಮನ್ನು ಮೂರು ಸರ್ಕಾರ ಸೇರಿ JCB ಎಂದು ಕರೆಯುತ್ತಾರೆ. JCB ಎಂದರೆ ಏನಪ್ಪಾ ಎಂದರೆ, J ಎಂದರೆ ಜನತಾದಳ, C ಎಂದರೆ ಕಾಂಗ್ರೆಸ್, B ಎಂದರೆ ಬಿಜೆಪಿ ಇವೆಲ್ಲವನ್ನೂ ಸೇರಿಸುತ್ತಿದ್ದೇವೆ ಎಂದು ಬಯ್ದರು. ಇವತ್ತು ಕೂಲಿ ಕಾರ್ಮಿಕರ ಮೇಲೆ ತಣ್ಣೀರು ಬಟ್ಟೆ ಹಾಕುವಂತ ಕೆಲಸವಾಗುತ್ತಿದೆ. ಮೂರು ತಿಂಗಳುಗಳಿಗೂ ಹೆಚ್ಚು ಕಾಲ ಮರಳು ಸರಬರಾಜು ಅಗುತ್ತಿಲ್ಲ. ಜೊತೆಗೆ ಲಾರಿ